ಜೆಎಸ್ಎಸ್ ಮಹಾವಿದ್ಯಾಪೀಠ
ಮೈಸೂರು

ಮತ್ತು

DASSAULT SYSTEMES

# ಎಲೆಕ್ಟ್ರಿಕ್ ವೆಹಿಕಲ್ ಮೊಬಿಲಿಟಿ ಸೆಂಟರ್ ಆಫ್ ಎಕ್ಸಲೆನ್ಸ್ ಮತ್ತು ಇನ್ನೊವೇಷನ್

ಹಾಗೂ

# ಜೆಎಸ್ಎಸ್ಎಟಿಇ – ರಜತ ಮಹೋತ್ಸವ ಉದ್ಘಾಟನೆ

**18 ಅಕ್ಟೋಬರ್ 2023 * ಬುಧವಾರ * ಬೆಳಗ್ಗೆ 10.30**

## ಸರ್ವರಿಗೂ ಹಾರ್ದಿಕ ಸ್ವಾಗತ


## ಜೆಎಸ್ಎಸ್ ಅಕ್ಯಾಡೆಮಿ ಆಫ್ ಟೆಕ್ನಿಕಲ್ ಎಜುಕೇಷನ್

(ರಜತ ಮಹೋತ್ಸವ ವರ್ಷ 1997–2022)

ಡಾ. ವಿಷ್ಣುವರ್ಧನ ರಸ್ತೆ, ಮೈಲಸಂದ್ರ–ಶ್ರೀನಿವಾಸಪುರ, ಬೆಂಗಳೂರು 560 060

Ph: 080 - 2861 2565 / 2861 1702 * www.jssateb.ac.in



**ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು:** ಶ್ರೀ ಸುತ್ತೂರು ಕ್ಷೇತ್ರದ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೇ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು 1954ರಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಮೈಸೂರಿನಲ್ಲಿ ಸ್ಥಾಪಿಸಿದರು. ಸಂಸ್ಥೆಯು ಸಮಾಜದ ಸರ್ವರಿಗೂ ಉತ್ತಮ ಶಿಕ್ಷಣ ಮತ್ತು ಗುಣಮಟ್ಟದ ಜೀವನವನ್ನು ರೂಪಿಸಿಕೊಳ್ಳಲು ಉತ್ತೇಜನ ನೀಡುತ್ತಿದೆ. ಜಾಗತಿಕ ಮಟ್ಟದಲ್ಲಿ ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ಸೇವಾನಿರತವಾಗಿದೆ. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಾರ್ಶನಿಕ ಮಾರ್ಗದರ್ಶನದಲ್ಲಿ ಮಹಾವಿದ್ಯಾಪೀಠವು ಶ್ರೀಮಠದ ಮೂಲ ಆಶಯಗಳನ್ನು ಸಾಕಾರಗೊಳಿಸುತ್ತಿದೆ.

**ಡಸಾಲ್ಟ್ ಸಿಸ್ಟಮ್ಸ್ ಇಂಡಿಯಾ ಪ್ರೈ. ಲಿ.** : ಆಧುನಿಕ ಜಗತ್ತು ತಂತ್ರಜ್ಞಾನಗಳಿಗೆ ಒಗ್ಗಿಕೊಳ್ಳುತ್ತಿರುವ ಇಂದಿನ ವಿಶೇಷ ಸಂದರ್ಭದಲ್ಲಿ ಜನರು ತಮ್ಮ ವ್ಯಾಪಾರ–ವ್ಯವಹಾರಗಳಲ್ಲಿ ಸಮರ್ಥನೀಯ ನಾವೀನ್ಯತೆಗಳನ್ನು ಅಳವಡಿಸಿಕೊಳ್ಳಲು ಡಸಾಲ್ಟ್ ಸಿಸ್ಟಮ್ಸ್ 3ಡಿ ಎಕ್ಸ್‌ಪೀರಿಯೆನ್ಸ್ ಕಂಪೆನಿಯು ಅವಕಾಶ ಮಾಡಿಕೊಡುತ್ತಿದೆ. ಕಂಪೆನಿಯ 3ಡಿ ಎಕ್ಸ್‌ಪೀರಿಯೆನ್ಸ್ ಪ್ಲಾಟ್‌ಫಾರ್ಮ್ ವಿಶ್ವದ ಮುಂಚೂಣಿಯಲ್ಲಿರುವ 3ಡಿ ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳ ವಿನ್ಯಾಸ, ರೂಪ ಮತ್ತು ಮಾರ್ಪಾಡುಗಳು ಹೇಗೆ ಆಗುತ್ತವೆ ಎಂಬುದನ್ನು ತಿಳಿಸುವ ಮೂಲಕ ಗ್ರಾಹಕರಿಗೆ ಉತ್ತಮ ಅನುಭವ ನೀಡುವಲ್ಲಿ ಸಕ್ರಿಯವಾಗಿದೆ. ಈ 3ಡಿ ಎಕ್ಸ್‌ಪೀರಿಯೆನ್ಸ್ ಪ್ಲಾಟ್‌ಫಾರ್ಮ್‌ನ ಮೂಲಕ ಪಾಲುದಾರಿಕೆಯಲ್ಲಿ ಸಾಮಾಜಿಕ ಉದ್ಯಮಗಳನ್ನು ಆರಂಭಿಸಬಹುದಾಗಿದೆ. ಅದರ ಆನ್‌ಲೈನ್ ಆರ್ಕಿಟೆಕ್ಚರ್‌ನೊಂದಿಗೆ 3ಡಿ ಎಕ್ಸ್‌ಪೀರಿಯೆನ್ಸ್ ಒದಗಿಸುವ ವಾತಾವರಣವು ವ್ಯಾಪಾರಗಳ ಮೌಲ್ಯಮಾಪನ ಮಾಡಲು ಸಹಾಯ ಮಾಡುತ್ತದೆ. ಡಸಾಲ್ಟ್ ಸಿಸ್ಟಮ್ಸ್ ಸಮೂಹವು ಜಗತ್ತಿನಾದ್ಯಂತ ವಿವಿಧ ರೀತಿಯ ಕೈಗಾರಿಕೆಗಳ ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಗ್ರಾಹಕರಿಗೆ ತನ್ನ ಸೇವೆಯನ್ನು ನೀಡುತ್ತಿದೆ.



**ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕ್ಯಾಡೆಮಿ, ಬೆಂಗಳೂರು** : ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಂಕಲ್ಪದೊಂದಿಗೆ ಬೆಂಗಳೂರಿನಲ್ಲಿ 1997ರಲ್ಲಿ ಸ್ಥಾಪಿತವಾದ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕ್ಯಾಡೆಮಿಯು ಹೊಸತನದ ದೀಪಸ್ತಂಭವಾಗಿ ಬೆಳಗುತ್ತಿದೆ. ಸಂಸ್ಥೆಯು ಭವಿಷ್ಯತ್ತಿನ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಉತ್ತಮ ಗುಣಮಟ್ಟದ ತಂತ್ರಜ್ಞಾನವನ್ನು ಸಂಶೋಧಿಸುವ ಗುರಿಯನ್ನು ಹೊಂದಿದೆ. ಜಾಗತಿಕವಾಗಿ ಸಮರ್ಥ ಇಂಜಿನಿಯರ್‌ಗಳು ಮತ್ತು ವಿಜ್ಞಾನಿಗಳನ್ನು ಸಜ್ಜುಗೊಳಿಸುವ, ಪ್ರೋತ್ಸಾಹಿಸುವ, ಬೆಂಬಲಿಸುವ ಕಾರ್ಯವನ್ನು ಮಾಡುತ್ತಿದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಸಂಯೋಜನೆ ಪಡೆದಿರುವ ಈ ಅಕ್ಯಾಡೆಮಿಯು ಒಂಬತ್ತು ಪದವಿಪೂರ್ವ ಮತ್ತು ನಾಲ್ಕು ಸ್ನಾತಕೋತ್ತರ ವಿಭಾಗಗಳನ್ನೊಳಗೊಂಡ ಕ್ರಿಯಾಶೀಲ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಈ ಸಂಸ್ಥೆಯು ಎಐಸಿಟಿಇಯಿಂದ ಅನುಮೋದನೆಗೊಂಡಿದೆ. ಉತ್ಕೃಷ್ಟತೆ, ಅಚಲವಾದ ಬದ್ಧತೆಯೊಂದಿಗೆ ಕಾರ್ಯ ನಿರ್ವಹಿಸುತ್ತಿರುವ ಅಕ್ಯಾಡೆಮಿಯು 2022–23ನೇ ಸಾಲಿನಲ್ಲಿ 25 ವರ್ಷಗಳನ್ನು ಪೂರೈಸಿ ರಜತೋತ್ಸವವನ್ನು ಆಚರಿಸುತ್ತಿದೆ. ಇಂಜಿನಿಯರಿಂಗ್ ಮತ್ತು ನಿರ್ವಹಣ ಶಿಕ್ಷಣವನ್ನು ನೀಡುತ್ತಿರುವ ಅಕ್ಯಾಡೆಮಿಯು 21 ಎಕರೆ ವಿಸ್ತಾರವಾದ ಕ್ಯಾಂಪಸ್‌ನಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡಿರುವ ಮೂರು ಆಕರ್ಷಣೀಯವಾದ ಭವ್ಯ ಶೈಕ್ಷಣಿಕ ಬ್ಲಾಕ್‌ಗಳನ್ನು ಹೊಂದಿದೆ. 3,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತ ಇಂಜಿನಿಯರಿಂಗ್ ಮತ್ತು ನಿರ್ವಹಣಾ ಕೌಶಲ್ಯಗಳನ್ನು ರೂಪಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಕನಸುಗಳು ವಾಸ್ತವವಾಗಿ ರೂಪುಗೊಳ್ಳುವಂತೆ ಅನಂತ ಭವಿಷ್ಯಕ್ಕಾಗಿ ಸಿದ್ಧತೆ ನಡೆಸುತ್ತಿದೆ.

## ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

## ಕೇಂದ್ರದ ಉದ್ಘಾಟನೆ

**ಶ್ರೀ ಎಂ.ಬಿ. ಪಾಟೀಲ**

ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

## ರಜತ ಮಹೋತ್ಸವ ಉದ್ಘಾಟನೆ

**ಶ್ರೀ ಡಿ.ವಿ. ಸದಾನಂದ ಗೌಡ**

ಸಂಸದರು ಮತ್ತು ಮಾಜಿ ಮುಖ್ಯಮಂತ್ರಿಗಳು
ಹಾಗೂ ಮಾಜಿ ಕೇಂದ್ರ ಸಚಿವರು

## ಅಧ್ಯಕ್ಷತೆ

**ಶ್ರೀ ಎಸ್.ಟಿ. ಸೋಮಶೇಖರ್**

ಶಾಸಕರು ಮತ್ತು ಮಾಜಿ ಸಚಿವರು

## ಮುಖ್ಯ ಅತಿಥಿಗಳು

**ಡಾ. ಹೆಚ್.ಎಸ್. ರಾಘವೇಂದ್ರ ರಾವ್**

ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಡಿಸಿಎಕ್ಸ್ ಸಿಸ್ಟಮ್ಸ್ ಲಿ.

**ಶ್ರೀ ಎನ್.ಜಿ. ದೀಪಕ್**

ವ್ಯವಸ್ಥಾಪಕ ನಿರ್ದೇಶಕರು, ಡಸಾಲ್ಟ್ ಸಿಸ್ಟಮ್ಸ್ ಇಂಡಿಯಾ ಪ್ರೈ. ಲಿ.

## ಗೌರವಾನ್ವಿತ ಅತಿಥಿಗಳು

**ಡಾ. ಸಿ.ಜಿ. ಬೆಟಸೂರಮಠ**

ಕಾರ್ಯನಿರ್ವಾಹಕ ಕಾರ್ಯದರ್ಶಿಗಳು
ಜೆಎಸ್ಎಸ್ ಎಂವಿಪಿ

**ಪ್ರೊ. ಎಂ.ಎಚ್. ಧನಂಜಯ**

ಸಲಹೆಗಾರರು, ಟಿಇಡಿ
ಜೆಎಸ್ಎಸ್ ಎಂವಿಪಿ

**ಡಾ. ಬಿ. ಸುರೇಶ್**

ನಿರ್ದೇಶಕರು, ಟಿಇಡಿ
ಜೆಎಸ್ಎಸ್ ಎಂವಿಪಿ





**ಜೆಎಸ್‌ಎಸ್ ಎಲೆಕ್ಟ್ರಿಕ್ ವೆಹಿಕಲ್ ಮೊಬಿಲಿಟಿ ಸೆಂಟರ್ ಆಫ್ ಎಕ್ಸಲೆನ್ಸ್ ಆಟೋಮೋಟಿವ್** : ಪ್ರಸ್ತುತ ಮಾರುಕಟ್ಟೆಯಲ್ಲಿ ಎಲೆಕ್ಟ್ರಿಕ್ ವಾಹನಗಳ ಕೊಳ್ಳುವಿಕೆ ನಿಧಾನವಾಗಿದ್ದರೂ, ಇಂದು ಅದು ಅನಿವಾರ್ಯವಾದುದಾಗಿದೆ. ಜನರು ಸಾಂಪ್ರದಾಯಿಕ ವಾಹನಗಳನ್ನು ಒಮ್ಮೆಗೇ ಕೈಬಿಡುವುದು ಸಾಧ್ಯವಿಲ್ಲದಿದ್ದರೂ ಕಾಲಕ್ಕೆ ತಕ್ಕಂತೆ ಭವಿಷ್ಯತ್ತಿನ ತಂತ್ರಜ್ಞಾನಗಳಿಗೆ ಒಗ್ಗಿಕೊಳ್ಳಬೇಕಾದ ಅನಿವಾರ್ಯತೆಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಅಗತ್ಯವಾದ ಸಂಶೋಧನೆ ಮತ್ತು ಅಭಿವೃದ್ಧಿಗೆ ಪ್ರೋತ್ಸಾಹ ನೀಡಲು ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ಡಸಾಲ್ಟ್ ಸಿಸ್ಟಮ್ಸ್ ಇಂಡಿಯಾ ಪ್ರೈ. ಲಿ. ಸಹಭಾಗಿತ್ವವನ್ನು ಹೊಂದುತ್ತಿವೆ. ಖಾಸಗಿ ಎಲೆಕ್ಟ್ರಿಕ್ ವಾಹನಗಳ ವಿನ್ಯಾಸ, ವಿಶ್ಲೇಷಣೆ ಮತ್ತು ಮೂಲಮಾದರಿಯ ಅಭಿವೃದ್ಧಿಯನ್ನು ಈ ಮಿಷನ್ ಈಗಾಗಲೇ ಪ್ರಾರಂಭಿಸಿದೆ. ಹೊಸ ಅನ್ವೇಷಣೆಯ ದೃಷ್ಟಿಕೋನದೊಂದಿಗೆ ಕಂಪನಿಯು ಬೆಂಗಳೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕ್ಯಾಡೆಮಿಯ ಸಮುಚ್ಚಯದಲ್ಲಿ ಎಲೆಕ್ಟ್ರಿಕ್ ವೆಹಿಕಲ್ ಸೆಂಟರ್ ಆಫ್ ಎಕ್ಸಲೆನ್ಸ್ ಅನ್ನು ಸ್ಥಾಪಿಸುತ್ತಿದೆ. ಈ ಕೇಂದ್ರವು ವಿದ್ಯಾರ್ಥಿಗಳು, ಸಂಶೋಧಕರು, ಉದ್ಯಮ ವೃತ್ತಿಪರರು ಮತ್ತು ಎಲೆಕ್ಟ್ರಿಕ್ ಸಾರಿಗೆ ಕ್ಷೇತ್ರದ ಬಗ್ಗೆ ಆಸಕ್ತಿಯುಳ್ಳ ಎಲ್ಲರನ್ನೂ ಮುಕ್ತವಾಗಿ ಆಹ್ವಾನಿಸುತ್ತದೆ. ವಿಶ್ವದರ್ಜೆಯ ಸೌಲಭ್ಯವುಳ್ಳ ಸಂಶೋಧನಾ ಪ್ರಯೋಗಾಲಯ, 3ಡಿ ಅನುಭವ ತರಬೇತಿ ಪ್ರಯೋಗಾಲಯ ಮತ್ತು ಆಭಿವರ್ಧಿತ ವರ್ಚುವಲ್ ಲ್ಯಾಬ್ ಕೂಡ ಇಲ್ಲಿದೆ. ಇವೆಲ್ಲವನ್ನೂ ತರಬೇತುದಾರರ ವಿವಿಧ ಸಂಶೋಧನಾ ಅಗತ್ಯಗಳನ್ನು ಪೂರೈಸಲು ಸಿದ್ಧಪಡಿಸಲಾಗುತ್ತಿದೆ. ಅತ್ಯಾಧುನಿಕ ಸಂಪನ್ಮೂಲಗಳೊಂದಿಗೆ ಎಲೆಕ್ಟ್ರಿಕ್ ಮೊಬಿಲಿಟಿಯ ಉತ್ತೇಜಕ ಕ್ಷೇತ್ರದಲ್ಲಿ ನಾವೀನ್ಯತೆ ಮತ್ತು ಪ್ರಗತಿಯನ್ನು ಹೆಚ್ಚಿಸಲು ಸನ್ನದ್ಧವಾಗಿದೆ.






ಜೆಎಸ್‌ಎಸ್ ಮಹಾವಿದ್ಯಾಪೀಠವು ಎಲೆಕ್ಟ್ರಿಕ್ ಮೊಬಿಲಿಟಿಗೆ ನೆರವಾಗುವ ಉತ್ಪಾದನೆ, ವಿನ್ಯಾಸ, ನಾವೀನ್ಯತಾ ಕೇಂದ್ರಕ್ಕಾಗಿ ಬೆಂಗಳೂರಿನಲ್ಲಿ ಜೆಎಸ್‌ಎಸ್ ಸೈನ್ಸ್ ಟೆಕ್ ಪಾರ್ಕ್‌ಗಳನ್ನು ಸ್ಥಾಪಿಸಲು ಸಹ ಉದ್ದೇಶಿಸಿದೆ. ಸ್ಟಾರ್ಟ್-ಅಪ್‌ಗಳು ಮತ್ತು ಯುವ ಉದ್ಯಮಿಗಳಿಗೆ ವೇದಿಕೆಯಂತೆ ಈ ಪಾರ್ಕ್ ಕಾರ್ಯ ನಿರ್ವಹಿಸಲಿದೆ. ಉತ್ಪಾದನೆ, ವಿನ್ಯಾಸ, ಕೌಶಲ್ಯ ಅಭಿವೃದ್ಧಿ ಮತ್ತು ಮಾನವಸಂಪನ್ಮೂಲಗಳನ್ನು ಒಳಗೊಂಡಿರುವ ಎಲ್ಲ ರೀತಿಯ ತರಬೇತಿ ಮತ್ತು ಸಂಶೋಧನಾ ಚಟುವಟಿಕೆಗಳು ಇಲ್ಲಿ ನಡೆಯಲಿವೆ. ಮಹಾವಿದ್ಯಾಪೀಠದ ತಾಂತ್ರಿಕ ಶಿಕ್ಷಣ ಸಂಸ್ಥೆಗಳಾದ ನೋಯಿಡಾದ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕ್ಯಾಡೆಮಿ ಮತ್ತು ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯಗಳಲ್ಲೂ ಇಂಥ ಎಲೆಕ್ಟ್ರಿಕ್ ವಾಹನಗಳ ವಿನ್ಯಾಸ ಮತ್ತು ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶವಿದೆ.